

# ‘ಝೀರೊ’ ಜ್ವರ



ಬಾಲಿವುಡ್‌ನಲ್ಲಿ ‘ಝೀರೊ’ ಜ್ವರ ಏರತೊಡಗಿದೆ. ‘ಬಾದ್‌ಷಾ’ ಶಾರೂಕ್ ಖಾನ್‌ನ ಹೊಸ ಸಿನಿಮಾ ತೆರೆಗೆ ಬರುತ್ತದೆ ಎಂದರೆ ಅದು ಉದ್ಯಮದ ಲೆಕ್ಕಾಚಾರಕ್ಕೂ ಅಳತೆಗೋಲು. ಚಿತ್ರದ ಶೂಟಿಂಗ್ ಭರದಿಂದ ನಡೆದಿದೆ. ಚಿತ್ರದ ಮೊದಲ ಟೀಸರ್ ಈಗಾಗಲೆ ಬಾಲಿವುಡ್‌ನಲ್ಲಿ ಸಂಚಲನ ಮೂಡಿಸಿದೆ. ಬಕ್ರೀದ್ ಹಬ್ಬದ ವೇಳೆಗೆ ಎರಡನೆ ಟೀಸರ್ ಬಿಡುಗಡೆ ಆಗಲಿದೆಯಂತೆ. ಒಂದು ನಿಮಿಷ 15 ಸೆಕೆಂಡ್‌ಗಳ ಎರಡನೇ ಟೀಸರ್‌ನಲ್ಲಿ ಶಾರೂಕ್ ಖಾನ್ ಮತ್ತು ಸಲ್ಮಾನ್ ಖಾನ್ ಜತೆಯಾಗಿ ಕುಣಿದಿದ್ದಾರೆ ಎನ್ನುವ ಸುದ್ದಿಗಳಿವೆ! ಚಿತ್ರದ ಹೀರೋಯಿನ್ ಕತ್ರೀನಾ ಕೈಫ್ ಮತ್ತು ಅನೂಷ್ಕಾ ಶರ್ಮಾ ಇಬ್ಬರೂ ತಮ್ಮ ಪಾತ್ರಗಳ ಬಗ್ಗೆ ಖುಷಿಯಾಗಿದ್ದಾರೆ.

ಹಿಮಾಂಶು ಶರ್ಮಾ ಬರೆದಿರುವ ಕಥೆಯಲ್ಲಿ ವಿಶೇಷ ಹಾಡೊಂದರಲ್ಲಿ ಶ್ರೀದೇವಿ, ರಾಣಿ ಮುಖರ್ಜಿ, ಕಾಜೋಲ್, ಕರಿಷ್ಮಾ ಕಪೂರ್, ಅಲಿಯಾ ಭಟ್ ಎಲ್ಲರೂ ಬಂದು ಹೋಗುತ್ತಾರಂತೆ! ಹಿಂದೆ ‘ಓಂ ಶಾಂತಿ ಓಂ’ ಚಿತ್ರದಲ್ಲೂ ಹೀಗೆ ಬಾಲಿವುಡ್‌ನ ಖ್ಯಾತನಾಮ ಜೋಡಿಗಳೆಲ್ಲ ಹಾಡೊಂದರಲ್ಲಿ ಕಾಣಿಸಿಕೊಂಡದ್ದು ಸಾಕಷ್ಟು ಯಶಸ್ಸು ಕಂಡಿತ್ತು. ಎಲ್ಲ ಸರಿಯಾಗಿ ನಡೆದರೆ ಡಿಸೆಂಬರ್ 21ಕ್ಕೆ ಚಿತ್ರದ ಬಿಡುಗಡೆ ಎನ್ನುವುದು ನಿರ್ಮಾಪಕರ ಮಾತು. ಒಟ್ಟಾರೆ ಶಾರೂಕ್ ಅಭಿನಯದ ‘ಝೀರೊ’ ಈ ವರ್ಷದ ಬಹುನಿರೀಕ್ಷೆಯ ಚಿತ್ರ ಎನ್ನುವುದಂತೂ ಖಚಿತ.

ಅಂದ ಹಾಗೆ ಅನೂಷ್ಕಾಗೆ ಈ ಚಿತ್ರದಲ್ಲಿ ವಿಫಲ ವಿಜ್ಞಾನಿಯೊಬ್ಬಳ ಪಾತ್ರ. ಆಕೆಯ ಪಾತ್ರದ ಶೂಟಿಂಗ್ ಪೂರ್ತಿ ಮುಗಿದಿದೆ. ‘ಚಿತ್ರ ತಂಡ ನನ್ನನ್ನು ತುಂಬ ಚೆನ್ನಾಗಿ ನೋಡಿಕೊಂಡಿದೆ. ಶಾರೂಕ್ ಅವರಂತೂ ಅದ್ಭುತ’ ಎಂದು ಸಾಮಾಜಿಕ ಜಾಲತಾಣದಲ್ಲಿ ಅನೂಷ್ಕಾ ಹೊಗಳಿದ್ದಾಳೆ. ಅದಕ್ಕೆ ತಕ್ಷಣ ಪ್ರತಿಕ್ರಿಯೆ ನೀಡಿರುವ ಶಾರೂಕ್, ‘ಅನೂಷ್ಕಾ ಜತೆಗೆ ಕೆಲಸ ಮಾಡುವುದೇ ಒಂದು ಸಂತೋಷದ ಅನುಭವ. ಈಗ ಆಕೆ ಇಲ್ಲದೆ ಶೂಟಿಂಗ್ ನೀರಸ ಅನ್ನಿಸುತ್ತಿದೆ’ ಎಂದಿದ್ದಾನೆ.

ಈ ಮಧ್ಯೆ ಹೊಸ ಚಿತ್ರ ‘ಸೆಲ್ಯೂಟ್’ ಗೆ ಸಿದ್ಧತೆಯೂ ನಡೆದಿದೆ. ಆರಂಭದಲ್ಲಿ ಈ ಚಿತ್ರದಲ್ಲಿ ಅಮೀರ್ ಖಾನ್ ಹೀರೊ ಎಂದು ನಿರ್ಮಾಪಕರು ಪ್ರಕಟಿಸಿದ್ದರು. ಆದರೆ ಈಗ ಹೀರೊ ಬದಲಾಗಿದ್ದು, ಶಾರೂಕ್ ಹೀರೊ ಆಗುವುದು ನಿಶ್ಚಿತವಾಗಿದೆ. ಕಳೆದ ವಾರದವರೆಗೂ ನಾಯಕಿ ಪಾತ್ರಕ್ಕೆ ದೀಪಿಕಾ ಹೆಸರು ಕೇಳಿಬರುತ್ತಿತ್ತು. ಆದರೆ ಈಗ ಬಂದಿರುವ ಸುದ್ದಿಗಳ ಪ್ರಕಾರ, ಈ ಚಿತ್ರಕ್ಕೆ ಕರೀನಾ ಕಪೂರ್ ನಾಯಕಿ ಆಗುತ್ತಾಳಂತೆ. ಹಾಗೇನಾದರೂ ಆದರೆ ಇದು ಈ ಜೋಡಿಯ ಮೂರನೇ ಚಿತ್ರವಾಗಲಿದೆ. ‘ಅಶೋಕ’ ಮತ್ತು ‘ರಾ ಒನ್’ ಚಿತ್ರದ ಈ ಯಶಸ್ವಿ ಜೋಡಿ ಮತ್ತೆ ಒಂದುಗೂಡುವುದನ್ನು ಪ್ರೇಕ್ಷಕರೂ ಕಾಯುತ್ತಿದ್ದಾರೆ.



‘ವೀರೆ ಡಿ ವೆಡಿಂಗ್’ ಚಿತ್ರದ ನಟನೆಗೆ ಮುಕ್ತಕಂಠದ ಶ್ಲಾಘನೆ ಪಡೆದಿರುವ ಕರೀನಾ, ಧರ್ಮ ಪ್ರೊಡಕ್ಷನ್‌ನ ಹೊಸ ಚಿತ್ರದಲ್ಲಿ ನಾಯಕಿಯಾಗಿ ನಟಿಸಲು ಅಕ್ಷಯ ಕುಮಾರ್ ಜತೆಗೆ ಸಹಿ ಹಾಕಿದ್ದಾಳೆ. ಗಗನಯಾತ್ರಿ ರಾಕೇಶ್ ಶರ್ಮಾ ಜೀವನ ಆಧರಿಸಿದ ಈ ಚಿತ್ರ ಸೆಪ್ಟೆಂಬರ್ ವೇಳೆಗೆ ಶೂಟಿಂಗ್ ಆರಂಭಿಸಲಿದೆ. ಬಿಡುಗಡೆ ಮುಂದಿನ ವರ್ಷಕ್ಕೆ.

■ ಬಿಂದು